ತುಮಕೂರು-ಬೆಂಗಳೂರು ರಸ್ತೆಯಲ್ಲಿ ಆಗುತ್ತಿರುವ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ

171 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು-ಬೆಂಗಳೂರು ರಸ್ತೆಯಲ್ಲಿ ಕಳೆದ ವರ್ಷದಲ್ಲಿ ಎಷ್ಟು ವಾಹನಗಳು ಅಪಘಾತಕ್ಕೀಡಾಗಿವೆ;

ಆ) ಹಾಗಿದ್ದಲ್ಲಿ, ಈ ವಾಹನಗಳ ಅಪಘಾತದಲ್ಲಿ ತಹಲ್‌ವರೆಗೂ ಎಷ್ಟು ಜನಗಳು ಸತ್ತಿದ್ದಾರೆ.

ಇ) ಇದನ್ನು ಸರಿಪಡಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೆ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ತುಮಕೂರು - 410
ಬೆಂಗಳೂರು - 730
ಒಟ್ಟು - 1140

ಆ) ತುಮಕೂರು - 95
ಬೆಂಗಳೂರು ಜಿಲ್ಲೆ - 108
ಒಟ್ಟು - 203

ಇ) ಅಪಘಾತಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ :

1) ಅತಿ ವೇಗ ಮತ್ತು ಪರವಾನಿಗೆ ವಾಹನ ಚಾಲನೆ ಮಾಡುವವರ ವಿರುದ್ಧ ಪದೇ ಪದೇ ತಪಾಸಣೆ ಕೈಗೊಳ್ಳಲಾಗುತ್ತಿದೆ.
2) ಸಂಚಾರ ನಿಯಮ ಮತ್ತು ರಸ್ತೆ ಸುರಕ್ಷತೆಯ ಪಾಲನೆಯ ಬಗ್ಗೆ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳಲಾಗಿದೆ.
3) ಸಂಚಾರಕ್ಕೆ ಅಡೆತಡೆಯಾಗುವ ವಾಹನಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗಿದೆ ಮತ್ತು
4) ಸಂಬಂಧಪಟ್ಟ ಚಾಲಕರ ವಿರುದ್ಧ ಸಹ ಕ್ರಮ ಕೈಗೊಳ್ಳಲಾಗಿದೆ.
5) ಮದ್ಯಪಾನ ಮಾಡಿ ವಾಹನ ನಡೆಸಿದವರ ವಿರುದ್ಧ ತಪಾಸಣೆಗಳು ಕೈಗೊಳ್ಳಲಾಗಿದೆ.
6) ಸೂಚನಾ ಫಲಕಗಳನ್ನು ರಸ್ತೆಯಲ್ಲಿ ಅಳವಡಿಸಲಾಗಿದೆ.
7) ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಜಿಲ್ಲಾ ಪೋಲೀಸರಿಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಗಸ್ತು ಕಾರ್ಯಾಚರಣೆ, ರ್‍ಯಾಕರ್ಸ್ ಮತ್ತು ಆಂಬುಲೆನ್ಸ್‌ಗಳನ್ನು ನೀಡಲು ಸರ್ಕಾರ ಪರಿಶೀಲಿಸುತ್ತಿದೆ.
8) ಪ್ರಮುಖ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ವೈದ್ಯಕೀಯ ಸಂಚಾರ ಘಟಕಗಳನ್ನು ಮತ್ತು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ವೈದ್ಯಕೀಯ ಕೇಂದ್ರಗಳನ್ನು (ಟ್ರಾಮಾಸೆಂಟರ್) ಸ್ಥಾಪಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

ವೀರಪ್ಪನ್ ಬಂಧನ

112 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಪ್ಪನ್‌ನನ್ನು ಹಿಡಿಯಲು ಬಂದಿದ್ದ ಕೇಂದ್ರ ಮೀಸಲು ಪಡೆ ಹಿಂದಿರುಗಿದೆಯೇ?